**ದಿಃ 12-12-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ವೈಎಂ ಆರ್ ವಕೀಲರಿಂದ**

ನನಗೆ ಕನ್ನಡ ಓದಲು ಬರೆಯಲು ಹೋದಾಗ ಕಣ್ಣು ಮಂಜು ಆಗುತ್ತದೆ ಕೈ ನಡುಗುತ್ತದೆ. ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ನಾನೇ ಬರೆಸಿದ್ದೇನೆ. ಅದನ್ನು ಎಷ್ಟು ವರ್ಷದ ಹಿಂದೆ ಬರೆಸಿದ್ದೆ ಎಂದು ಹೇಳಲು ಆಗುವುದಿಲ್ಲ. ಬಹಳ ವರ್ಷ ಆಗಿದ್ದರಿಂದ ಅದರಲ್ಲಿ ಏನು ಬರೆದಿದೆ ಎಂದು ಹೇಳಲು ಆಗುವುದಿಲ್ಲ ಎಂದರೆ ಸಾಕ್ಷಿಯು ನೋಡಿ ಹೇಳುತ್ತೇನೆ ಎಂದು ನುಡಿಯುತ್ತಾರೆ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಒಟ್ಟಾಗಿ ಏನು ಬರೆದಿರುತ್ತಾರೆ ಎಂದು ಹೇಳಲು ಆಗುವುದಿಲ್ಲ. ಈಗ ತೋರಿಸಿದ ದಾಖಲೆಯಲ್ಲಿರುವ ಸಹಿ ನನ್ನದೇ ಇರುತ್ತದೆ ಸದರಿ ದಾಖಲೆಯನ್ನು ದಿನಾಂಕ 22.05.2025 ರಂದು ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಒಪ್ಪಿದ್ದರಿಂದ ಅದನ್ನು **ನಿಪಿ.24** ಎಂದು ಗುರುತಿಸಲಾಯಿತು. ನಿಪಿ.24 ರಲ್ಲಿ ಹೇಳಿರುವ ವಿಷಯವನ್ನು ನಾನೇ ಹೇಳಿ ಬರೆಸಿದ್ದೇನೆ ಎಂದರೆ ಸರಿ. ನಿಪಿ.24 ರಂತೆ ಪ್ರಮಾಣ ಪತ್ರ ಮಾಡುವ ಪೂರ್ವದಲ್ಲಿ ನಮ್ಮ ಕುಟುಂಬದ ಆಸ್ತಿಗಳು ವಿಭಾಗ ಆಗಿರಲಿಲ್ಲ ಎಂದರೆ ಸರಿ. ವಾದಿಗಳು ನನ್ನ ತಮ್ಮಂದಿರು ಇರುತ್ತಾರೆ. 2 ನೇ ಪ್ರತಿವಾದಿ ನನ್ನ ಅಣ್ಣ ಇರುತ್ತಾರೆ. ನಮ್ಮ ಕುಟುಂಬದ ಹಿರಿಯ ಮಗ 2 ನೇ ಪ್ರತಿವಾದಿ ಎಂದರೆ ಸರಿ. ನನ್ನ ತಂದೆ ಮೃತಪಟ್ಟು 10-12 ವರ್ಷಗಳು ಆಗಿರಬಹುದು. ನನ್ನ ತಂದೆಯನ್ನು ಸೇರಿ ಇಬ್ಬರು ಸಹೋದರರು. ನನ್ನ ತಂದೆ ಮತ್ತು ಈಶ್ವರಪ್ಪರವರು ಸಹೋದರರು ಇರುತ್ತಾರೆ. ನನ್ನ ತಂದೆ ಮತ್ತು ಚಿಕ್ಕಪ್ಪನ ವೃತ್ತಿ ಹುಟ್ಟಿದಾಗಿನಿಂದಲೂ ವ್ಯವಸಾಯ ಎಂದರೆ ಸರಿ. ನನ್ನ ತಂದೆ ಜೀವಂತ ಇದ್ದಾಗ ಮನೆಯ ಯಜಮಾನಿಕೆಯನ್ನು ಅವರೇ ಮಾಡುತ್ತಿದ್ದರು ಎಂದರೆ ಸರಿ. ನನ್ನ ತಂದೆ ಮತ್ತು ಚಿಕ್ಕಪ್ಪ ಒಟ್ಟು ಕುಟುಂಬದ ಆಸ್ತಿಗಳಿಗೆ ಸಂಬಂಧಿಸಿದಂತೆ ನೋಂದಾಯಿತ ಪಾಲು ವಿಭಾಗ ಮಾಡಿಕೊಂಡಿಲ್ಲ ಎಂದರೆ ಸರಿ. ನನ್ನ ತಂದೆ ಮರಣ ಹೊಂದಿದ ನಂತರ ಪೌತಿ ಆಧಾರದ ಮೇರೆಗೆ 2 ನೇ ಪ್ರತಿವಾದಿ ಹೆಸರಿಗೆ ಖಾತೆ ಬದಲಾವಣೆ ಆಗಿರುತ್ತದೆ ಎಂದರೆ ಸರಿ. ನನ್ನ ಚಿಕ್ಕಪ್ಪ ಈಗ ಮೃತಪಟ್ಟಿರುತ್ತಾರೆ. ನನ್ನ ಚಿಕ್ಕಪ್ಪ ಮರಣ ಹೊಂದಿದ ನಂತರ ಅವರ ಹೆಸರಿನಲ್ಲಿ ಇರುವ ಆಸ್ತಿಗಳು ಪೌತಿ ಆಧಾರದ ಮೇರೆಗೆ ಅವರ ಹೆಂಡತಿ ಹೆಸರಿಗೆ ಖಾತೆ ಬದಲಾವಣೆ ಆಗಿರುತ್ತದೆ ಎಂದರೆ ಸರಿ. ಈಗ ತೋರಿಸಿದ ದಾಖಲೆಯಲ್ಲಿರುವ ಹೆಸರುಗಳೆಲ್ಲವು ನಮ್ಮ ಕುಟುಂಬದ ಸದಸ್ಯರ ಹೆಸರುಗಳು ಎಂದರೆ ಸರಿ. ಸದರಿ ಮ್ಯುಟೇಶನ್ ನ ಪ್ರತಿಯನ್ನು ಸಾಕ್ಷಿ ಒಪ್ಪಿದ್ದರಿಂದ **ನಿಪಿ.25** ಎಂದು ಗುರುತಿಸಲಾಯಿತು. ನಿಪಿ.25 ರಂತೆ ಖಾತೆ ಬದಲಾವಣೆಯನ್ನು ನಾನೇ ಮಾಡಿಸಿರುತ್ತೇನೆ. ಸದರಿ ಆಸ್ತಿಯು ಒಟ್ಟು ಕುಟುಂಬದ ಆಸ್ತಿ ಇರುವುದರಿಂದ

ಜಂಟಿ ಖಾತೆಯಾಗಿರುತ್ತದೆ ಎಂದರೆ ಸರಿ. ಈಗ ತೋರಿಸಿದಂತೆ ನಾನೇ ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದೆ ಎಂದರೆ ಸರಿ. ಸಾಕ್ಷಿ ಒಪ್ಪಿದ್ದರಿಂದ ಆದೇಶದ ಜೆರಾಕ್ಸ್ ಪ್ರತಿಯನ್ನು **ನಿಪಿ.26** ಎಂದು ಗುರುತಿಸಲಾಯಿತು. ನಿಪಿ.25 ರಂತೆ ಮ್ಯುಟೇಶನ್ ಆದ ನಂತರ ನಿಪಿ.26 ರಂತೆ ಮೇಲ್ಮನವಿ ಸಲ್ಲಿಸಿದ್ದೆ ಎಂದರೆ ಸರಿ. ನಿಪಿ.25 ಮತ್ತು 26 ರಂತೆ ಆದೇಶ ಆಗುವ ಪೂರ್ವದಲ್ಲಿಯೇ ದಿನಾಂಕ 08.03.2019 ರಂತೆ ಈ ದಾವೆಯನ್ನು ದಾಖಲಿಸಿದ್ದಾರೆ ಎಂದರೆ ಸರಿ. ದಾವೆಯಲ್ಲಿ ಸೇರಿಸಿರುವ ಎಲ್ಲಾ ಆಸ್ತಿಗಳ ಬಗ್ಗೆ ನಮ್ಮ ವಕೀಲರ ಮೂಲಕ ನಾನು ಕೇಳಿ ತಿಳಿದುಕೊಂಡಿರುತ್ತೇನೆ. ದಾವಾದಲ್ಲಿ ಹೇಳಿರುವ ಷೆಡ್ಯೂಲ್ ಆಸ್ತಿಗಳು ನಮ್ಮ ಕುಟುಂಬದ ಆಸ್ತಿಗಳು ಎಂದರೆ ಸರಿ. ನನ್ನ ತಂದೆ ಮತ್ತು ಚಿಕ್ಕಪ್ಪ ಮೃತಪಟ್ಟ ನಂತರ ನಾವು ಯಾವುದೇ ನೋಂದಾಯಿತ ಪಾಲು ವಿಭಾಗ ಪತ್ರ ಮಾಡಿಕೊಂಡಿಲ್ಲ ಎಂದರೆ ಸರಿ.

ಈಗ ತೋರಿಸಿದ ದಾಖಲೆಯಲ್ಲಿರುವ ಸಹಿ ನನ್ನ ಮತ್ತು ನನ್ನ ಹೆಂಡತಿಯ ಸಹಿಗಳು ಇರುತ್ತವೆ. 2 ನೇ ಪ್ರತಿವಾದಿಯು ತಯಾರಿಸಿಕೊಟ್ಟ ದಾಖಲೆಗೆ ನಾನು 2 ನೇ ಪ್ರತಿವಾದಿಯ ಮಗನ ಹೆಸರಿಗೆ ಈ ದಾಖಲೆಯನ್ನು ಮಾಡಿಕೊಟ್ಟಿರುತ್ತೇನೆ ಎಂದರೆ ಸರಿ. ಸಾಕ್ಷಿಯು ಒಪ್ಪಿದ್ದರಿಂದ ಕ್ರಯಪತ್ರದ ಪ್ರತಿಯನ್ನು **ನಿಪಿ.27** ಎಂದು ಗುರುತಿಸಲಾಯಿತು. ಈಗ ತೋರಿಸಿದ ದಾಖಲೆಯಲ್ಲಿರುವ ಸಹಿ ನನ್ನ ಮತ್ತು ನನ್ನ ಹೆಂಡತಿಯ ಸಹಿಗಳು ಇರುತ್ತವೆ. 2 ನೇ ಪ್ರತಿವಾದಿಯು ತಯಾರಿಸಿಕೊಟ್ಟ ದಾಖಲೆಗೆ ನಾನು ಮೋಹನ್ ಎನ್ನುವವರ ಹೆಸರಿಗೆ ಈ ದಾಖಲೆಯನ್ನು ಮಾಡಿಕೊಟ್ಟಿರುತ್ತೇನೆ ಎಂದರೆ ಸರಿ. ಸಾಕ್ಷಿಯು ಒಪ್ಪಿದ್ದರಿಂದ ಕ್ರಯಪತ್ರದ ಪ್ರತಿಯನ್ನು **ನಿಪಿ.28** ಎಂದು ಗುರುತಿಸಲಾಯಿತು. ನಿಪಿ.28 ರಲ್ಲಿರುವ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳು ಎಂದರೆ ಸರಿ. ನಿಪಿ.28 ರಲ್ಲಿ ಇರುವ ಅಂಶಗಳ ಬಗ್ಗೆ ನನಗೆ ಮಾಹಿತಿ ಇಲ್ಲ. ನನ್ನ ತಂದೆ ಮತ್ತು ಚಿಕ್ಕಪ್ಪ ಜೀವಂತ ಇದ್ದಾಗ 2 ನೇ ಪ್ರತಿವಾದಿಯು ದತ್ತಕ ಹೋದ ಬಗ್ಗೆ ನನ್ನ ಸಮಕ್ಷಮ ಯಾವುದೇ ದತ್ತಕ ಪತ್ರ ಆಗಿಲ್ಲ. 2 ನೇ ಪ್ರತಿವಾದಿಯು ವಡ್ನಾಳು ಸೊಸೈಟಿಯಲ್ಲಿ ಅಧ್ಯಕ್ಷ ಮತ್ತು ತುಮಕೋಸ್ ನಲ್ಲಿ ನಿರ್ದೇಶಕ ಆಗಿದ್ದಾಗ ನಮ್ಮ ಕುಟುಂಬದಲ್ಲಿಯೇ ವಾಸವಿದ್ದರು ಎಂದರೆ ಸರಿ. ತುಮಕೋಸಿನಿಂದ ನಮ್ಮ ಕುಟುಂಬಕ್ಕೆ ಒಂದು ನಿವೇಶನ ಮಂಜೂರು ಆದ ಬಗ್ಗೆ ನನಗೆ ಗೊತ್ತಿಲ್ಲ.

ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ವಿನಂತಿಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

**OS.No.**13/2019

**ಡಿ ಡಬ್ಲ್ಯೂ:4**

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಚನ್ನಗಿರಿ.